International Journal of Kannada Research 2016; 2(3): 50-52

International Journal of Kannada Research
www.kannadajournal.com

ISSN: 2454–5813
IJSR 2016; 2(3): 50-52
© 2016 IJKS
www.kannadajournal.com
Received: 16-04-2016
Accepted: 19-05-2016

**ಡಾ. ದೇವಮ್ಮಣ್ಣಿ ಎಂ**
ಸಹ ಪ್ರಾಧ್ಯಾಪಕರು ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು, ಕರ್ನಾಟಕ, ಭಾರತ

Correspondence
**ಡಾ. ದೇವಮ್ಮಣ್ಣಿ ಎಂ**
ಸಹ ಪ್ರಾಧ್ಯಾಪಕರು ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು, ಕರ್ನಾಟಕ, ಭಾರತ

# ಮರಾಠಿ ಭಾಷೆ ಮತ್ತು ಸಾಹಿತ್ಯ

**ಡಾ. ದೇವಮ್ಮಣ್ಣಿ ಎಂ**

**ಪೀಠಿಕೆ**

ಮರಾಠಿ ಭಾಷೆಯು ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದ ಪ್ರಮುಖ ಭಾಷೆ. ಮಹಾರಾಷ್ಟ್ರ ರಾಜ್ಯದ ಆಡಳಿತ ಭಾಷೆ ಸಂವಿಧಾನದಲ್ಲಿ ಮಾನ್ಯತೆಯನ್ನು ಪಡೆದಿರುವ ಭಾಷೆ. ಇದನ್ನು ಮಹಾರಾಷ್ಟ್ರ, ಗೋವ, ಕರ್ನಾಟಕ, ಮಧ್ಯಪ್ರದೇಶ, ಗುಜರಾತ್, ಆಂಧ್ರಪ್ರದೇಶ, ದೆಹಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ವಾಸಿಸುವ ಸುಮಾರು ೭೩ ಮಿಲಿಯನ್ ಜನರು ಮಾತನಡುತ್ತಾರೆ.

ಮರಾಠಿ ಭಾಷೆಯು ಮಹರಾಷ್ಟ್ರ ಮತ್ತು ಅದರ ಅಪಭ್ರಂಶದಿಂದ ರೂಪುಗೊಂಡಿದೆ ಎಂದು ಹೇಳಲಾಗುತ್ತದೆ. ಸುಮಾರು ೧೦ನೇ ಶತಮಾನದಲ್ಲಿ ಜನ್ಮ ತಳೆಯಿತು ಎಂದು ಹೇಳುವ ಈ ಭಾಷೆಯು ಆರಂಭದಲ್ಲಿ ‘ನಾಗರಿ ಲಿಪಿಯನ್ನು ಕ್ರಿ.ಶ ೧೩, ೧೪ ನೇ ಶತಮಾನದಲ್ಲಿ ‘ಮೋಡಿ ಲಿಪಿಯನ್ನು ತದನಂತರ ‘ದೇವನಾಗರಿ ಲಿಪಿಯನ್ನು ತನ್ನ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಹೊಂದಿದೆ.

ಮರಾಠಿ ಭಾಷೆಯ ಪ್ರಾಚೀನತೆಯನ್ನು ಗಮನಿಸುವಲ್ಲಿ ಕ್ರಿ.ಶ ೯೮೨ರಲ್ಲಿ ಶ್ರವಣಬೆಳಗೊಳದ ಗೊಮ್ಮಟೇಶ್ವರನ ಮೂರ್ತಿಯ ಪಾದದಲ್ಲಿ ಬರೆಯಲಗಿರುವ ಶಿಲಶಾಸನ ‘ಚಾವುಂಡರಾಜೇಂ ಕರವೀಯಲೇ ಎಂಬುದೇ ಮರಾಠಿ ಭಾಷೆಯ ಅತ್ಯಂತ ಪ್ರಾಚೀನ ಬರಹವೆಂದು ಗುರುತಿಸುತ್ತಾರೆ. ಮತ್ತೆ ಕೆಲವು ವಿದ್ವಾಂಸರು ಮರಾಠಿಯ ಮೊದಲ ಶಿಲಾಶಾಸನವು ೧೦೧೨ನೇ ಇಸವಿಯಷ್ಟು ಹಳೆಯದಾದುದು ಎನ್ನುತ್ತಾರೆ. ಆದರೆ ಕೆಲವು ಉಲ್ಲೇಖಗಳ ಪ್ರಕಾರ ಕ್ರಿ.ಶ. ೧೨ನೇಯ ಶತಮಾನದ ಕಾಲದಲ್ಲಿಯು ಮಹಾರಾಷ್ಟ್ರದ ಭಾಷೆ ಸಂಸ್ಕೃತವೇ ಆಗಿತ್ತು. ಇತರೆ ಭಾರತೀಯ ಭಾಷೆಗಳಂತೆ ಮರಾಠಿಯು ಸಹ ಶಿಷ್ಟ ಸಾಹಿತ್ಯಕ್ಕೆ ಮುನ್ನ ಜನಪದ ಹಾಡು, ನುಡಿಗಟ್ಟು, ಒಗಟು, ಓವಿ, ಗಾದೆ ಮಾತುಗಳಲ್ಲಿ ಆಡುಭಾಷೆಯ ಅಸ್ತಿತ್ವವನ್ನು ಹೊಂದಿತ್ತು.

ಮರಾಠಿ ಭಾಷೆಯಲ್ಲಿ ಸಾಮಾನ್ಯ ಸಂಯೋಜಿತ, ಮಿಶ್ರ ಎಂಬ ವಾಕ್ಯ ಭೇದಗಳುಂಟು, ಕರ್ಮಣಿ ಪ್ರಯೋಗದ ವಾಕ್ಯಗಳಲ್ಲಿ ಮಾತ್ರ ಕ್ರಿಯಾಪದ ಕರ್ಮದಂತೆ ಪ್ರಯೋಗವಾಗುತ್ತದೆ. ಈ ಪದ್ಧತಿ ಸಂಸ್ಕೃತ ಮತ್ತು ಪ್ರಕೃತ ಭಾಷೆಗಳಿಂದ ಬಂದಿದೆ. ಇಲ್ಲಿನ ಕ್ರಿಯಾ ಪದಗಳಲ್ಲಿ ಎರಡು ವಿಧಗಳು ೧.ಪೂರ್ಣಕ್ರಿಯಾದ ೨.ಅಪೂರ್ಣ ಕ್ರಿಯಾಪದ. ಸರ್ವಕಾಲಿತ ಅರ್ಥದಲ್ಲಿ ಅರ್ಥದಲ್ಲಿ ಬಳಕೆಯಾಗುವಂಥವು ಪೂರ್ಣ ಕ್ರಿಯಾಪದಗಳಾದರೆ ಇತರ ಅರ್ಥದಲ್ಲಿ ಅಪೂರ್ಣ ಕ್ರಿಯಾಪದ ಬಳಕೆಯಾಗುತ್ತದೆ. ಇದಲ್ಲದೆ – ಸಕರ್ಮಕ, ಅಕರ್ಮಕ, ಸಹಾಯಕ, ಭಾವಾತ್ಮಕ ಮೊದಲಾದ ಕ್ರಿಯಾಪದಗಳು ಇವೆ. ಈ ಭಾಷೆಯ ಬಹುವಚನ ರೂಪದ ಸಾಮಾನ್ಯ ಅಂತ್ಯ ಪ್ರತ್ಯಯಗಳೆಂದರೆ ಏ, ಯಾ ಇವು ಪ್ರತ್ಯಗಳು ಸೇರಿ ನಾಮಪದಗಳಾಗುತ್ತವೆ.

ಈ ಭಾಷೆಯಲ್ಲಿ ಸ್ವರ ವ್ಯಂಜನ ವಿಸರ್ಗ ಎಂಬ ೩ ಬಗೆಯ ಸಂಧಿ ವ್ಯವಸ್ಥೆ ಇದೆ. ನಾಮಪದದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಭೇದಗಳೂ ಏಕವಚನ ಬಹುವಚನ ರೂಪಗಳಲ್ಲಿ ಇವೆ. ಪುಲ್ಲಿಂಗ ದೊಡ್ಡಸ್ತಿಕೆಯನ್ನು, ಸ್ತ್ರೀಲಿಂಗ ಕೋಮಲತೆಯನ್ನು, ನಪುಂಸಕಲಿಂಗ ಕ್ಷುದ್ರತೆಯನ್ನು ಸೂಚಿಸುತ್ತದೆ ಎಂಬುದು ಮರಾಠಿ ಜನರ ಭಾವನೆ.

**ಮರಾಠಿ ಸಾಹಿತ್ಯ:** (ಪ್ರಾಚೀನ ಮತ್ತು ಆಧುನಿಕ) ಮರಾಠ ಸಾಹಿತ್ಯದ ಆರಂಭವನ್ನು ಕ್ರಿ.ಶ.೧೮೦೦ರ ಪೂರ್ವಕಾಲದಲ್ಲೆ ಗುರುತಿಸಲಾಗುತ್ತದೆ. ಮಾನುಭಾವ ಮತ್ತು ವಾರಕರಿ ಎಂಬ ಎರಡು ಧಾರ್ಮಿಕ ಪಂಥಗಳ ಸಂತರು ಬರೆದ ಧಾರ್ಮಿಕ ಬರವಣಿಗೆಗಳಿಂದ ಮರಾಠಿ ಸಾಹಿತ್ಯ ಪ್ರಾರಂಭವಾಯಿತು ಎನ್ನಬಹುದು. ಮಹಾನುಭಾವ ಪಂಥೀಯರು ಗದ್ಯವನ್ನು, ವಾರಕರಿ ಪಂಥೀಯರು ಕಾವ್ಯವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡರು.

ಮಹಾನುಭಾವ ಪಂಥದ ಸ್ಥಾಪಕ ಹರಪಾಲದೇವ/ಚಕ್ರಧರ. ಇವನ ಶಿಷ್ಯ ,ಮಹೇಂದ್ರಭಟ ತನ್ನ ಗುರುವಿನ ಸಂದೇಶಗಳನ್ನು ಆಚಾರ್ಯಾಸೂತ್ರ ಎಂಬ ಹೆಸರಿನಲ್ಲಿ ಸಂಗ್ರಹಿಸಿ ಇದಕ್ಕೆ ವಚನ ಎಂಬುದಾಗಿ ಹೆಸರಿಡುತ್ತಾನೆ. (ಕ್ರಿ.ಶ ೧೨೬೩) ಈ ಕೃತಿಯು ನಮ್ಮ ಕನ್ನಡದ ವಚನ ರೂಪವನ್ನು ಹೋಲುತ್ತದೆ. ಇದು ಮರಾಠಿ ಭಾಷೆಯ ಮೊದಲ ಗದ್ಯಗ್ರಂಥ. ಅಂತೆಯೇ ಮುಕುಂದರಾಜನೆಂಬ ಕವಿಯನ್ನು ಮರಾಠಿಯ ಆದ್ಯಕವಿಯೆಂದು ಕರೆಯಲಾಗುತ್ತದೆ. ಈತನ ವಿವೇಕಸಿಂಧು ಮತ್ತು ಪರಮಾಮೃತ ಪ್ರಮುಖ ಕೃತಿಗಳು. ಮುಂದೆ ಮರಾಠಿ ಭಾಷೆಯಲ್ಲಿ ಬಹಳ ದೊಡ್ಡ ಹೆಸರು ಜ್ಞಾನೇಶ್ವರರದು, ಇವರ ಭಾವಾರ್ಥದೀಪಿಕೆ (೧೫೪೮) ಅತ್ಯಂತ ಪ್ರಮುಖವಾದ ಕೃತಿ, ಇವರ ನಂತರ ಬಂದ ಮುಕ್ತೇಶ್ವರ ಎಂಬ ಕವಿ ಮಹಾಭಾರತವನ್ನು (೧೬೦೨) ಮರಾಠಿ ಭಾಷೆಗೆ ಅನುವಾದ ಮಾಡಿದನು.ಅನಂತರ ಕಾಲದಲ್ಲಿ ಸಂತ ತುಕಾರಾಮರಂತಹ ಹಲವು ಸಮಾಜ ಸುಧಾರಕರು (ಜ್ಯೋತಿ ಬಾ ಪುಲೆ) ಮರಾಠಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಈ ಅವಧಿಯಲ್ಲಿ ವಾಮನಪಂಡಿತ, ರಘುನಾಥಪಂಡಿತ, ಶಿವಕಲ್ಯಾಣನೂ, ರಾಮದಾಸ, ಅಮೃತರಾಯ, ಮಹೀಪತಿ ಪ್ರಮುಖ ಸಾಹಿತಿಗಳಾಗಿದ್ದು ಯಥಾರ್ಥ ದೀಪಿಕಾ, ನಳದಮಯಂತಿ ಸ್ವಯಂವರ, ಪಾಂಡವ ಪ್ರತಾಪ, ಭಕ್ತಿಜಯ, ಭಕ್ತ ಲೀಲಾಮೃತ, ಸಂತವಿಜಯ,ಸಂತಲೀಲಾವಕೃತಿ ಮುಂತಾದವು ಪ್ರಮುಖ ಕೃತಿಗಳಾಗಿವೆ.

ಆಧುನಿಕ ಮರಾಠಿ ಸಾಹಿತ್ಯವನ್ನು ಕ್ರಿ.ಶ.೧೮೦೦ರ ನಂತರ ಕಾಲದಲ್ಲಿ ಗುರುತಿಸಲಾಗುತ್ತದೆ. ಪ್ರಾಚೀನ ಸಾಹಿತ್ಯದಲ್ಲಿ ಪ್ರಸಿದ್ಧ ಕವಿ ಮೋರೋಪಂತ್‌ನ ಕಾಲ ಕ್ರಿ.ಶ ೧೭೯೪ಕ್ಕೆ ಅಂತ್ಯಗೊಳ್ಳತ್ತದೆ.೧೮೧೮ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಮಹಾರಾಷ್ಟ್ರದ ರಾಜ್ಯಾಧಿಕಾರವನ್ನು ವಹಿಸಿಕೊಂಡಿತು.ಹಾಗಾಗಿ ೧೭೯೪-೧೧೮೧೮ ರವರೆಗಿನ ಕಾಲವನ್ನು ಪ್ರಾಚೀನ ಮರಾಠಿ ಸಾಹಿತ್ಯದ ಸಮಾಪ್ತಿ ಕಾಲವೆಂದು ಮತ್ತು ಆಧುನಿಕ ಮರಾಠಿ ಸಾಹಿತ್ಯದ ಅರುಣೋದಯ ಕಾಲವೆಂದು ಗುರುತಿಸಲಾಗುತ್ತದೆ. ಪ್ರಾಚೀನ ಮರಾಠಿ ಸಾಹಿತ್ಯವು (ಐತಿಹಾಸಿಕ ಕಾವ್ಯವು) ಸಾಂಪ್ರದಾಯಿಕ ಕಾವ್ಯ ಹಾಗೂ ಆಧುನಿಕ ಗದ್ಯ ಶೈಲಿಯಿಂದ ಕೂಡಿದುದು ಈ ಸಾಂಪ್ರದಾಯಿಕ ಶೈಲಿ ಬರಹಕ್ಕೆ ಪವಾಡಗಳೆಂದು ಹೆಸರು. ಕಾವ್ಯವುಗಳು, ಲಾವಣಿಗಳೂ ಈ ಗುಂಪಿಗೆ ಸೇರಿವೆ. ಆಧುನಿಕ ಗದ್ಯ ಶೈಲಿಯ ಬರಹಗಳು, ಬಖಾರು ಅಥವಾ ಬಖೈರುಗಳೆಂದು ಕರೆಯಲ್ಪಡುತ್ತವೆ. ಇವನ್ನು ಬರೆಯುವವರಿಗೆ ಸಾಹಿರವೆಂದು ಹೆಸರು. ಇವರು ಯಥಾರ್ಥವಾದ ವಿಷಯ ವಿವರಣೆಗಳನ್ನು ಗುಣ, ಜನಗಳ ಸುಖ ದುಃಖಗಳನ್ನು, ಗುಣದೋಷಗಳನ್ನು ಬರೆದಿಟ್ಟುದ್ದಾರೆ. ಅವುಗಳಲ್ಲಿ ಹೃದಯವಿದ್ರಾವಕವಾದ ಕೆಲವು ದುರಂತ ಕಥೆಗಳೂ ಇವೆ.

ಆಧುನಿಕ ಮರಾಠಿ ಸಾಹಿತ್ಯದಲ್ಲಿ ಆರಂಭ ಕಾಲವನ್ನು ಶಕ್ತಿ ಸಂಪಾದನೆಯ ಕಾಲವೆಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಮರಾಠಿ ನಿಘಂಟುಗಳ ರಚನೆ, ದೇಶಿಯ ವಿದ್ಯಾಸಂಸ್ಥೆಗಳ ಆರಂಭಗೊಂಡವು. ಮರಾಠಿ ಲೇಖಕರು ಈ ಅವಧಿಯಲ್ಲಿ ಒಂದು ಆಂಗ್ಲ ಮರಾಠಿ ಶೈಲಿಯನ್ನು ಬಳಕೆಗೆ ತಂದರು ಇದನ್ನು ಇಂಗ್ರೇಜಿ ಅವತಾರ ಎನ್ನುತ್ತಾರೆ.ಆಧುನಿಕ ಮರಾಠಿ ಸಾಹಿತ್ಯದಲ್ಲಿ ಬಾಲಶಾಸ್ತ್ರೀ ಜಂಭೇಕರ್, ಅಗರ್‌ಕರ್,ಚೆಪ್ಲಂಕರ್, ಲೋಕಹಿತವಾದಿ ಮುಂತಾದ ಆಧುನಿಕ ಬರಗಾರರು ಪ್ರಬಂಧವನ್ನು ತಮ್ಮ ಸಾಧನೆಗೆ ಮಾಧ್ಯಮವನ್ನಾಗಿ ಬಳಸಿದರು(ಚಪ್ಲಂಕರ-ನಿಬಂಧಮೇಲೆ) ಇವರು ಸಾಹಿತ್ಯ ಪತ್ರಿಕೆಗಳನ್ನು ಆರಂಭಿಸಿದರು.(ದರ್ಪಣ್, ದಿಗ್ದರ್ಶನ- ಬಾಲ ಶಾಸ್ತ್ರೀ ಜುಬೇಕರ್)

**ಆಧುನಿಕ ಕಾಲದ ಕೆಲವು ಮುಖ್ಯ ಅಂಶಗಳು**

- ವಸಾಹತು ಆಧುನಿಕತೆಯ ಕಾಲದಲ್ಲಿ ಇತರ ಭಾರತೀಯ ಭಾಷೆಗಳಂತೆ ಮರಾಠಿ ಭಾಷೆಯಲ್ಲಿಯೂ ಕೃತಿಗಳು ಇಂಗ್ಲೀಷನಿಂದ ಮರಾಠಿಭಾಷೆಗೆ ಅನುವಾದಗೊಂಡವು.
- ಜ್ಯೋತಿ ಬಾ ಪುಲೆ ಮದೇವ ಗೋವಿಂದ ರಾನಡೆ, ಹರಿನಾರಾಯಣ ಆಪ್ಟೆ ಸಾಮಾಜಿಕ ಸುಧಾರಣೆಯ ಹಲವು ಕೃತಿಗಳನ್ನು ಬರೆದರು.
- ಲೋಕಮಾನ್ಯ ತಿಲಕರ ಕೇಸರಿ ಪತ್ರಿಕೆ ಕೂತ ಸಾಹಿತ್ಯ ಚರ್ಚೆಗೆ ಸೂಕ್ತ ಅಂಕಣವನ್ನು ಒದಗಿಸಿತು.
- ಕ್ರೈಸ್ತರು ಕೂಡ ಮರಾಠಿ ಸಾಹಿತ್ಯದ ಬೆಳವಣಿಗೆಗೆ ವಿಶೇಷ ಸಹಾಯ ಮಾಡಿದರು. ಕ್ರಿಸ್ತಪುರಾಣ ಮರಾಠಿಯಲ್ಲಿ ರಚನೆಯಾಯ್ತು, ಕ್ರೈಸ್ತರ ಸಂತರ ಜೀವನ ಚರಿತ್ರೆಗಳು ಮರಾಠಿಯಲ್ಲಿ ರಚನೆಯಾದವು.
- ಮಹಮ್ಮದೀಯರಿಂದ ರಚಿತವಾದ ಮರಾಠಿ ಗ್ರಂಥ ಸಾಹಿತ್ಯವು ವಿಸ್ತ್ರುತಲವಾಗಿದ್ದು ಶ್ವೇಕ್ ಮಹಮದ್, ಜಮಲಷಹಾ, ಕ್ಷಹಾಬೇಗ್, ಅಲೇಮ್‌ಖಾನ್, ಶ್ವೇಕ್ ಸುಲ್ತಾನ ಪ್ರಮುಖ ಸಾಹಿತಿಗಳು.
- ಮರಾಠಿ ಸಾಹಿತ್ಯದಲ್ಲಿ ವೀರಶೈವ ಕವಿಗಳಾದ ಶಾಂತಲಿಂಗಪ್ಪ ತನ್ನ ಕರಣಹಸಿಗೆ ಕೃತಿಯಲ್ಲಿ ಬಸವಣ್ಣನ ಜೀವನ ಚರಿತ್ರೆಯನ್ನು, ಬ್ರಹ್ಮದಾಸನು ಲೀಲಾವಿಶ್ವಂಭರದಲ್ಲಿ ಪ್ರಭುದೇವರ ಕತೆಯನ್ನು ವಿವರವಾಗಿ ವರ್ಣಿಸಿದ್ದಾರೆ.
- ಚಪಳಾಕರರು ಮುಂದಿನ ತಲೆಮಾರು ತಿಲಕ್, ಅಗರ್‌ಕರ್, ಆಪ್ಟೆ, ಪರಂಜಪೆರಿಗೆ ಪ್ರೇರಕ ಶಕ್ತಿಯಾದರು. ತಿಲಕರ ಗೀತಾರಹಸ್ಯ ಪ್ರಧಾನ ಲೇಖನಗಳ ನಾಲ್ಕು ಸಂಪುಟಗಳ ಮರಾಠಿ ಸಾಹಿತ್ಯ ಚರಿತ್ರೆಯಲ್ಲಿ ಅಪೂರ್ವ ಸ್ಥಾನ ಹೊಂದಿದವು. ಇದೇ ಕಾಲದಲ್ಲಿ ವಿ.ಎಂ.ಜೋಷಿ, ಖವೇಡಕರ್ ಲಕ್ಷ್ಮಣ್ ಶಾಸ್ತ್ರೀ, ಕೇಲ್ಕರ್ ಹಲವು ಕೃತಿಗಳನ್ನು ಬರೆದರು.

ಮುಂದೆ ಈ ಪ್ರಬಂಧದ ಮಾದರಿ ಸಣ್ಣ ಕತೆಗಳ ಮಾದರಿಯಲ್ಲಿ ರಚನೆಯಾನೆಯಾಯ್ತು. ಎನ್.ಎಸ್.ಫಡಕೆ, ವಿ.ಎಸ್. ಖಾಂಡೇಕರ್, ಸಾಂತಾರಾಮ್ ಮೊದಲಾದವರು ಈ ಪ್ರಕಾರದ ಸಾಹಿತ್ಯದಲ್ಲಿ ಹೆಸರು ಮಾಡಿದರು .ಅನಂತರ ಬಾಲಚಂದ ನೆಮಾಡೆ, ನಾಮದೇವ, ಘಸಾಳ್, ವಸಂತ ಅಬಾಜಿ, ಅಬಿಧನ, ಮಂಗೇಶ ಕಾಳೆ, ವಜ್ರೇಶ್ ಸೋಲಂಕಿ, ಪ್ರಹ್ಲಾದ ಕೇಶವ ಅತ್ರೆ, ಕುಸುವರಾಗ್ರಜ ವಜಯ ತೆಂಡೂಲ್ಕರ್ ಸಣ್ಣಕತೆ, ನಾಟಕ, ಪ್ರಕಾರಗಳಲ್ಲಿ ಪ್ರಸಿದ್ಧರಾದರು.

**ಕಾದಂಬರಿ**

ಕಾದಂಬರಿ ಮೂಲ ಕಹಾನಿ ಎಂಬ ಜನಪದ ಕಥೆ, ಬಹಿರುಗಳು, ಪಂಚತಂತ್ರದ ಕಥೆಗಳು ಮಹಾನುಭಾವರ ಕಥಾ ಗ್ರಂಥಗಳು ಮುಂತಾದವುಗಳಿಂದ ಆರಂಭ ಆಧುನಿಕ ಮರಾಠಿ ಸಾಹಿತ್ಯದ ಆರಂಭದಲ್ಲಿಯೇ ಕಾದಂಬರಿ ಪ್ರಕಾರ ಪ್ರಸಿದ್ಧಿ ಹೊಂದಿದೆ.

೧. ೧೫೦ ವರ್ಷಗಳ ಭಾಷಾಂತರ ಯುಗ (೧೮೦೦-೧೮೬೦)
೨. ಕಟ್ಟು ಕಥೆಗಳಕಾಲ (೧೮೬೦-೧೮೭೫)
೩. ಐತಿಹಾಸಿಕ ಕಾದಂಬರಿಗಳ ಕಾಲ (೧೮೭೫-೧೮೮೫)
೪. ವಾಸ್ತವ ಕಾದಂಬರಿಗಲ ಕಾ(೧೮೮೫-೧೯೧೫)
೫. ಅದ್ಭುತ ಕಾವ್ಯ ಕಾದಂಬರಿಗಳ ಕಾಲ (೧೯೧೫-೧೯೩೫)
೬. ರಾಜಕೀಯ ಕಾದಂಬರಿಗಳ ಕಾಲ (೧೯೩೫-ಇತ್ತೀಚೆಗೆ)

ಯಮುನಾಪರ್ಯಾಟನ್ ಮೊದಲ ಮರಾಠಿ ಕಾದಂಬರಿ.ಹರಿನಾರಾಯಣ ಆಪ್ಟೆ, ಫಡಕೆ,ಖಾಂತೇಕರ್, ವಾಮನ ಮ್ಹೂರ ಜೋಷಿ, ಎಸ್.ಕೆ.ದಾಮ್ಲೆ, ಎಸ್.ವಿ.ಕೇತರ್‌ಕರ್ ಪ್ರಮುಖ ಕಾದಂಬರಿಕಾರರು.

**ಮರಾಠಿ ದಂತ ಆತ್ಮಕಥೆಗಳು**

೧. ಅಕ್ಕರಮಾಶಿ(ಅಕ್ರಮಸಂತಾನ)–ಸ್ಯಣಕುಮಾರ ಲಿಂಬಾಳೆ
೨. ಉಚಲ್ಯಾ– ಲಕ್ಷ್ಮಣ ಗಾಯಕವಾಡ
೩. ಗಬಾಳ– ದಾದಾಸಾಹೇಬ ಮ್ಹೂರಿ ಮೋರಿ

**ಕಾದಂಬರಿಗಳು**

೧. ಬಾಲಚಂದ್ರ ಪಾಣೇಕರ್
೨. ವಿ.ಎಂ. ಇನಾಂದಾರ್
೩. ಶಾ.ಮಂ.ಕೃಷ್ಣರಾಯ
೪. ಸರಸ್ವತಿ ಗಜಾನನರಿಸಬೂಡ

**ಜ್ಞಾನಪೀಠ ಪ್ರಶಸ್ತಿಗಳು**

೧. ವಿ.ವಿ.ಶಿರವಾಡಕರ್–೧೯೮೭
೨. ವಿ.ಎಸ್.ಖಾಂಡೇಕರ್–೧೯೭೪ (ಯಯಾತಿ ವಿ.ಎಂ.ಇನಾಂದಾರ್)
೩. ವಿಂದ್ಯಾಕರಂದೀಕರ್–೨೦೦೩
೪. ಬಾಲಚಂದ್ರ ನೇಮಾತೆ–೨೦೧೪
೫. ಮರಾಠಿ ರಂಗಭೂಮಿ, ಮರಾಠಿ ಚಿತ್ರೋದ್ಯಮ ಇಂದು ಉನ್ನತಿಯತ್ತ ಸಾಗುತ್ತಿವೆ. ದಾದಾ ಸಾಹೇಬ್ ಪಾಲ್ಕೆ ನಾನಾ ಪಾಟೇಕರ್ ಅವರನ್ನು ಇಲ್ಲಿ ಸ್ಮರಿಸಬಹುದು.
೬. ಒಟ್ಟಾರೆ ದೇಶಿ ಸೊಗಡಿನ ಸಾಹಿತ್ಯ ಮತ್ತು ನಾಟಕ ಚಿತ್ರಕಲೆಗಳು ಇಂದಿನ ಮರಾಠಿ ಸಾಹಿತ್ಯ ಮತ್ತು ಬದುಕಿನ ಜೀವಾಳವಾಗಿವೆ.